( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ಅಸಲು ದಾವೆ ನಂ.137/2016**

**ದಿನಾಂಕಃ 28-08-2023, ಪಿ ಡಬ್ಲ್ಯೂ–1**

| | |
|---|---|
| ಹೆಸರುಃ | ಮೂಡಲಗಿರಿಗೌಡ ಎಂ ಎಸ್ |
| ತಂದೆಯ ಹೆಸರುಃ | ಲೇಟ್ ಸಣ್ಣೇಗೌಡ |
| ವಯಸ್ಸುಃ | 65 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸಃ | ಮಲ್ಲಿನಾಥಪುರ ಗ್ರಾಮ |

ವಾದಿಯ ಮುಖ್ಯ ವಿಚಾರಣೆ ಃ ಶ್ರೀ ಹೆಚ್ ಆರ್ ಎನ್ ವಕೀಲರಿಂದಃ

ಈ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದರ ಪ್ರತಿ ಪುಟದಲ್ಲಿರುವ ಸಹಿಯೂ ನನ್ನದೇ ಆಗಿರುತ್ತದೆ.

1. ದಿಃ 18-04-2016 ರ ಕಾನೂನು ತಿಳುವಳಿಕೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ -1 ಎಂದು ಗುರುತಿಸಲಾಯಿತು.

2. 4 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ -2 ರಿಂದ 5 ಎಂದು ಗುರುತಿಸಲಾಯಿತು.

3. ದಿಃ 23-04-2016 ರ ಮರುತಿಳುವಳಿಕೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ -6 ಎಂದು ಗುರುತಿಸಲಾಯಿತು.

4. ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ -7 ಎಂದು ಗುರುತಿಸಲಾಯಿತು.

5. 4 ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ -8 ರಿಂದ 11 ಎಂದು ಗುರುತಿಸಲಾಯಿತು.

6. ವಾದಿಯು ತಹಶೀಲ್ದಾರವರಿಗೆ ನೀಡಿದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ -12 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶವನ್ನು ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**